ದಿನಾಂಕ : 04.09.2021

<u>ಓ.ಎಸ್ ನಂ.23/2016 ರಲ್ಲಿ</u>
ಪಿ.ಡಬ್ಲ್ಯೂ-1(ಹೇಮ್‌ಚಂದ್)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು 5 ರಿಂದ 7ನೇ ಪ್ರತಿವಾದಿಗಳ ಪರ ಶ್ರೀ ಯು.ಎಲ್ ವಕೀಲರಿಂದಃ</u>

ನಾನು ರಾಮನಗರದ ಜಿಲ್ಲಾಧಿಕಾರಿಗಳು ಕಛೇರಿಯಲ್ಲಿ ಅನುಕಂಪದ ಆಧಾರದಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ತಾಯಿಯ ಮರಣಾ ನಂತರ ನನಗೆ ಅನುಕಂಪದ ಆಧಾರದಲ್ಲಿ ಕೆಲಸ ದೊರೆತಿದೆ. ನನ್ನ ತಾಯಿ ದ್ವಿತೀಯ ದರ್ಜೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಬಿ.ಎಂ.ಮಹದೇವಯ್ಯನವರು ಬೆಂಗಳೂರಿನಲ್ಲಿ ಸರ್ಕಾರಿ ನೌಕರರಾಗಿದ್ದರು. ಬಿ.ಎಂ.ಮಹದೇವಯ್ಯ ಕರ್ತವ್ಯದಲ್ಲಿರುವಾಗ ಮೃತಪಟ್ಟಿದ್ದರು. ಅವರ ಕೆಲಸವನ್ನು ಅನುಕಂಪದ ಆಧಾರದಲ್ಲಿ ನನ್ನ ತಾಯಿಗೆ ಕೊಟ್ಟಿದ್ದರು. ಬಿ.ಎಂ.ಮಹದೇವಯ್ಯ ಖಾಯಿಲೆಯಿಂದ ಮೃತಪಟ್ಟಿದ್ದರು. ಅಸಲುದಾವೆ ಸಂಖ್ಯೆ 23/2016 ರ ವಾದಪತ್ರದಲ್ಲಿ ಕಾಣಿಸಿದ ನನ್ನ ವಿಳಾಸದಲ್ಲಿ ಸ್ವಂತ ಮನೆಯಲ್ಲಿ ವಾಸವಿದ್ದೇನೆ. ಆ ವಿಳಾಸದಲ್ಲಿರುವ ಮನೆ ಖರೀದಿಸಿದ್ದಲ್ಲ, ಬಿ.ಡಿ.ಎ ನಿಂದ ಮಂಜೂರಾಗಿದೆ. ನನ್ನ ತಂದೆಗೆ ಆ ಮನೆ ಮಂಜೂರಾಗಿತ್ತು. ನನ್ನ ತಂದೆ ಎಂದರೆ ಬಿ.ಎಂ.ಮಹದೇವಯ್ಯ. ಬಿ.ಎಂ.ಮಹದೇವಯ್ಯ 1983-84 ರಲ್ಲಿ ಮೃತಪಟ್ಟಿದ್ದರು. ಬಿ.ಎಂ.ಮಹದೇವಯ್ಯನವರಿಗೆ ಎಷ್ಟು ಮದುವೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಬಿ.ಎಂ.ಮಹದೇವಯ್ಯನವರಿಗೆ ಗೌರಮ್ಮ ಎಂಬ ಮೊದಲ ಪತ್ನಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಅವರುಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಬಿ.ಎಂ.ಮಹದೇವಯ್ಯನವರನ್ನು ನಮ್ಮ ಜಮೀನಿನಲ್ಲಿ ಅಂದರೆ ಸರ್ವೇ ನಂ.169 ರಲ್ಲಿ ದಫನ ಮಾಡಿದ್ದೆವು. ಈ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡಿಲ್ಲ. ಬಿ.ಎಂ.ಮಹದೇವಯ್ಯನವರ ಸಮಾಧಿ ಸರ್ವೇ

ನಂ.169 ರಲ್ಲಿ ಇದೆ. ಅವರ ಸಮಾಧಿ ಇದೆ ಎಂದು ತೋರಿಸಲು ಫೋಟೋ ಹಾಜರು ಮಾಡಲು ನನಗೆ ತೊಂದರೆ ಇಲ್ಲ. ನನ್ನ ತಂದೆ ಕೆಲಸಕ್ಕೆ ಸೇರುವಾಗ ಸಿಂಧುತ್ವ ಪ್ರಮಾಣಪತ್ರ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ಕಾರಿ ಸೇವೆಗೆ ಸೇರುವಾಗ ಸಿಂಧುತ್ವ ಪ್ರಮಾಣಪತ್ರ ಕಡ್ಡಾಯ ಎಂದರೆ ಸರಿ. ನನ್ನ ತಂದೆ ಬಾನಂದೂರು ಗ್ರಾಮದಲ್ಲಿ ವಾಸವಿದ್ದರು ಎಂದು ಸಿಂಧುತ್ವ ಪ್ರಮಾಣಪತ್ರ ಸಲ್ಲಿಸಿದ್ದನ್ನು ಹಾಜರು ಮಾಡಬಹುದಾ ಎಂದರೆ ಅದು ಹಳೆಯ ದಾಖಲೆಯಾದ ಕಾರಣ ಹಾಜರು ಮಾಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಬಿ.ಎಂ.ಮಹದೇವಯ್ಯ ಬಾನಂದೂರು ಗ್ರಾಮದಲ್ಲಿ ವಾಸವಿದ್ದರು ಎಂಬ ಬಗ್ಗೆ ಸಾರ್ವಜನಿಕ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಾನು ಕೂಡ ಬಾನಂದೂರು ಗ್ರಾಮದಲ್ಲಿ ವಾಸವಿದ್ದೇನೆ ಎಂಬ ಬಗ್ಗೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ನಾನು ಬಾನಂದೂರು ಗ್ರಾಮದಲ್ಲಿ ವಾಸವಿರುವ ಬಗ್ಗೆ ಯಾವುದೇ ದಾಖಲೆ ಇಲ್ಲ. ನನ್ನ ತಂದೆ ಬಾನಂದೂರು ಗ್ರಾಮದಲ್ಲಿ ವಾಸ ಮಾಡಿದ ಬಗ್ಗೆ ದಾಖಲೆ ಇಲ್ಲ.

ಪೂಜಾರಿ ಮಾದಯ್ಯ ಬಾನಂದೂರು ಗ್ರಾಮದವರು ಎಂದರೆ ಸರಿ, ಅವರ ಮಗ ಮಲ್ಲಪ್ಪ ಎಂದರೆ ಸರಿ. ಪೂಜಾರಿ ಮಾದಯ್ಯನವರ ಪತ್ನಿ ಭದ್ರಕಾಳಮ್ಮ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಬಾನಂದೂರು ಗ್ರಾಮದ ಬಸವೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜಾರಿ ಮಾದಯ್ಯ ಮತ್ತು ಮಲ್ಲಪ್ಪ ಅರ್ಚಕರಾಗಿದ್ದರು ಎಂದರೆ ಸರಿ. ನನ್ನ ತಂದೆ ಬಾನಂದೂರು ಬಸವೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜೆ ಮಾಡುತ್ತಿದ್ದ ಬಗ್ಗೆ ದಾಖಲೆ ಹಾಜರು ಮಾಡಿದ್ದೇನಾ ಎಂದರೆ ಸಾಕ್ಷಿಯು ವಿಶೇಷ ದಿನಗಳಲ್ಲಿ ಬಂದು ಸಹಾಯ ಮಾಡುತ್ತಿದ್ದರು ಎಂದು

ನುಡಿಯುತ್ತಾರೆ. ನನ್ನ ಪ್ರಕಾರ ವಿಶೇಷ ದಿನಗಳು ಎಂದರೆ ಹಬ್ಬ ಹರಿದಿನಗಳಾಗಿರುತ್ತವೆ, ಜಾತ್ರೆ ಕೂಡ ಆಗುತ್ತಿತ್ತು. ಜಾತ್ರೆ ಸಂದರ್ಭದಲ್ಲಿ ಸಹಾಯ ಮಾಡುತ್ತಿದ್ದ ಬಗ್ಗೆ ಫೋಟೋ ಅಥವಾ ಕರಪತ್ರಗಳನ್ನು ಹಾಜರು ಮಾಡಿಲ್ಲ. ಹಬ್ಬ ಹರಿದಿನಗಳಂದು ಬಂದಾಗ ನಾವು ಅಲ್ಲೇ ಇರುತ್ತಿದ್ದೆವು. ಅಲ್ಲಿ ಇದ್ದಂತಹ ಸಂದರ್ಭದಲ್ಲಿ ನಾವು ನಮ್ಮ ಮನೆಯಲ್ಲೇ ವಾಸವಿದ್ದೆವು. ನಮ್ಮ ಮನೆ ಎಂದರೆ ಬಾನಂದೂರು ಗ್ರಾಮದಲ್ಲಿ ನಮ್ಮ ತಾತನ ಮನೆಯಾಗಿರುತ್ತದೆ. ನನ್ನ ತಾತನ ಮನೆ ಈಗ ಪಾಳು ಬಿದ್ದಿದೆ. ನಾನು ಮತ್ತು ನನ್ನ ತಂದೆ ಕುಟುಂಬದ ಕಾರ್ಯಕ್ರಮಗಳಲ್ಲಿ ಹಬ್ಬ ಹರಿದಿನಗಳಂದು ಭಾಗವಹಿಸಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿಲ್ಲ. ನಾನಾಗಲೀ, ನನ್ನ ತಂದೆ ಯಾಗಲೀ ಬಸವೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜೆ ಮಾಡಿಲ್ಲ ಹಾಗೂ ಹಬ್ಬ ಹರಿದಿನ ಹಾಗೂ ಜಾತ್ರೆಯಂದು ನಾವಿಬ್ಬರು ಸಹಾಯಕರಾಗಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಬಾನಂದೂರು ಗ್ರಾಮ ಅಥವಾ ಇಟ್ಟಮಡು ಗ್ರಾಮದಲ್ಲಿ ಎಂದಿಗೂ ವಾಸವಿರಲಿಲ್ಲ ಎಂದರೆ ವಾಸವಿದ್ದೇನೆ ಎಂದು ಸಾಕ್ಷಿಯು ನುಡಿಯತ್ತಾರೆ. ನಾನು ಬಾನಂದೂರು ಗ್ರಾಮದವನೇ ಅಲ್ಲ ಎಂದರೆ ಸರಿಯಲ್ಲ. ನಾನು ಪೂಜಾರಿ ಮಾದಯ್ಯನವರ ವಂಶಸ್ಥನಲ್ಲ ಎಂದರೆ ಸರಿಯಲ್ಲ. ಬಿ.ಎಂ.ಮಹದೇವಯ್ಯ ಪೂಜಾರಿ ಮಾದಯ್ಯನವರ ಮಗ ಅಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಅವರ ಜೀವಿತಕಾಲದಲ್ಲಿ ದಾವಾಸ್ವತ್ತುಗಳಲ್ಲಿ ಭಾಗ ಕೋರಿ ಪೂಜಾರಿ ಮಾದಯ್ಯ ಮತ್ತು ಮಲ್ಲಪ್ಪನವರಿಗೆ ನೋಟಿಸ್, ಪತ್ರ ಕಳುಹಿಸಿರಲ್ಲಿ ಮತ್ತು ದಾವೆ ಸಲ್ಲಿಸಿರಲಿಲ್ಲ ಎಂದರೆ ಸರಿ. ನನ್ನ ತಂದೆಯ ಮರಣಾ ನಂತರ 2016 ರವರೆಗೆ ನಾವು ಮಲ್ಲಪ್ಪ ಮತ್ತು ಅವರ

ದಿನಾಂಕ : 04.09.2021 ಓ.ಎಸ್ ನಂ.23/2016 ರಲ್ಲಿ

ಪಿ.ಡಬ್ಲ್ಯೂ-1(ಹೇಮ್‌ಚಂದ್)

ಕುಟುಂಬದವರಿಗೆ ದಾವಾ ಸ್ವತ್ತುಗಳಲ್ಲಿ ಭಾಗ ಕೋರಿ ನೋಟಿಸ್ ಕಳುಹಿಸಿರಲ್ಲಿ ಮತ್ತು ದಾವೆ ಸಲ್ಲಿಸಿರಲಿಲ್ಲ ಎಂದರೆ ಸಾಕ್ಷಿಯು ನೋಟಿಸ್ ಕಳುಹಿಸಿರಲಿಲ್ಲ ಆದರೆ ಭಾಗ ಕೇಳಿದ್ದೆವು ಎಂದು ನುಡಿಯುತ್ತಾರೆ. 1984 ರಿಂದಲೇ ನಾವು ಮಲ್ಲಪ್ಪನವರಲ್ಲಿ ಭಾಗ ಕೇಳುತ್ತಿದ್ದೆವು. ಈ ಬಗ್ಗೆ ನ್ಯಾಯ ಪಂಚಾಯಿತಿ ಊರಿನಲ್ಲಿ ಆಗಿತ್ತು. ನ್ಯಾಯ ಪಂಚಾಯಿತಿಯಲ್ಲಿ ಊರಿನ ಹಿರಿಯರು ಭಾಗವಹಿಸಿದ್ದರು. 1986-87 ರಲ್ಲಿ ಪಂಚಾಯಿತಿ ಆಗಿತ್ತು. ಪಂಚಾಯಿತಿಯಲ್ಲಿ ಶಿವಣ್ಣ, ಚೋಳೂರಪ್ಪ, ತಿಮ್ಮಯ್ಯ ಭಾಗವಹಿಸಿದ್ದರು. ಈ ಮೂವರನ್ನು ಪಂಚಾಯಿತಿಯಲ್ಲಿ ಭಾಗವಹಿಸಲು ನಾನು ಕೇಳಿದ್ದೆ. ಈ ಮೂವರು ಈಗ ಬದುಕಿಲ್ಲ. ಈ ಹಿಂದೆ ಪಂಚಾಯಿತಿ ಆದ ಬಗ್ಗೆ ಸಾಕ್ಷಿ ವಿಚಾರಣೆ ಮಾಡಿಸಲು ನನಗೆ ಅದು ಹಳೆಯದಾದ ಕಾರಣ ಆಗುವುದಿಲ್ಲ. ಬಿ.ಎಂ.ಮಹದೇವಯ್ಯನವರು ಸ್ವತ್ತು ಮಂಜೂರು ಮಾಡುವ ಬಗ್ಗೆ ಮಲ್ಲಪ್ಪನವರಿಗೆ ಅಧಿಕಾರ ಪತ್ರ ಕೊಟ್ಟಿರಲಿಲ್ಲ. ಸಾಕ್ಷಿಯು ಮುಂದುವರೆದು ಬಿ.ಎಂ.ಮಹದೇವಯ್ಯನವರು ಸರ್ಕಾರಿ ಕೆಲಸದಲ್ಲಿದ್ದ ಕಾರಣ ಮಲ್ಲಪ್ಪನವರಿಗೆ ಅರ್ಜಿ ಹಾಕಿಸಲು ಸಹಾಯ ಮಾಡಿದ್ದರು ಎಂದು ನುಡಿಯುತ್ತಾರೆ. ಬಿ.ಎಂ.ಮಹದೇವಯ್ಯನವರೇ ಖುದ್ದು ಅರ್ಜಿ ಸಲ್ಲಿಸಲು ಏನು ತೊಂದರೆ ಇತ್ತು ಎಂದರೆ ಅವರು ಸರ್ಕಾರಿ ಕೆಲಸದಲ್ಲಿದ್ದರು ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ತಂದೆ ಬಾನಂದೂರು ಗ್ರಾಮದಲ್ಲಿ ವಾಸವಿರುವ ಬಗ್ಗೆ ಕೆಲಸಕ್ಕೆ ಸೇರುವಾಗ ಡಿಕ್ಲೇರೇಷನ್ ಕೊಟ್ಟಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ವಿಚಾರಿಸಿ ಡಿಕ್ಲೇರೇಷನನ್ನು ಹಾಜರು ಮಾಡಲು ನನಗೆ ತೊಂದರೆ ಇಲ್ಲ ಎಂದರೆ ಹಳೆಯದಾದ ಕಾರಣ ಹಾಜರು ಮಾಡಲಾಗುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ತಂದೆ ಅವರ ಜೀವಿತಕಾಲದಲ್ಲಿ ಆದಾಯ ತೆರಿಗೆ ಪಾವತಿಸುತ್ತಿರಲಿಲ್ಲ. ನಾನು

ದಿನಾಂಕ : 04.09.2021 ಓ.ಎಸ್ ನಂ.23/2016 ರಲ್ಲಿ
ಪಿ.ಡಬ್ಲ್ಯೂ-1(ಹೇಮ್‌ಚಂದ್)

ಆದಾಯ ತೆರಿಗೆ ಪಾವತಿಸುತ್ತಿಲ್ಲ. ನಾನು ಆದಾಯ ತೆರಿಗೆ ಇಲಾಖೆಗೆ ನನ್ನ ಸಂಬಳದ ಬಗ್ಗೆ ಅರ್ಜಿ ಸಲ್ಲಿಸಿದ್ದೇನಾ ಎಂದರೆ ಅದು ಒಳಪಡುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಕೆಲಸಕ್ಕೆ ಸೇರುವಾಗ ನನಗೆ ಊರಿನಲ್ಲಿ ಆಸ್ತಿ ಇದೆ ಎಂದು ನಾನು ಡಿಕ್ಲೇರೇಷನ್ ಕೊಟ್ಟಿರಲಿಲ್ಲ. ಗೇಣಿ ಹಕ್ಕಿನಲ್ಲಿ ಆಸ್ತಿ ಮಂಜೂರಾದ ನಂತರ ರೆವಿನ್ಯೂ ದಾಖಲೆಗಳಲ್ಲಿ ನನ್ನ ತಂದೆಯ ಹೆಸರಾಗಿಲೀ, ನನ್ನ ಹೆಸರಾಗಲೀ ಬಂದಿಲ್ಲ ಎಂದರೆ ಸರಿ. ನಾನಾಗಲೀ ನನ್ನ ತಂದೆಯಾಗಲೀ, ಕಂದಾಯ ಪಾವತಿಸಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿದ್ದೇನಾ ಎಂದರೆ ಇಲ್ಲ, ಸಾಕ್ಷಿಯು ನಾವೇ ಅವರಿಗೆ ಹಣ ಕೊಡುತ್ತಿದ್ದು ದಾಖಲೆ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದು ನುಡಿಯುತ್ತಾರೆ. ಮಲ್ಲಪ್ಪನವರಿಗೆ ಮನಿ ಆರ್ಡರ್ ಮಾಡಿದ ಬಗ್ಗೆ ದಾಖಲೆ ಕೊಟ್ಟಿಲ್ಲ, ಸಾಕ್ಷಿಯು ಮುಂದುವರೆದು ಊರಿಗೆ ಹೋದಾಗ ಕಂದಾಯ ಕಟ್ಟಿ ಎಂದು ಹಣ ಕೊಡುತ್ತಿದ್ದೆವು ಎಂದು ನುಡಿಯುತ್ತಾರೆ. ಈ ಬಗ್ಗೆ ಯಾವುದೇ ಸಾಕ್ಷಿ ಇಲ್ಲ. ನಾನಾಗಲೀ, ನನ್ನ ತಂದೆಯಾಗಲೀ ಕಂದಾಯ ಪಾವತಿಸಲು ಹಣ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗಾಗಲೀ, ನನ್ನ ತಂದೆಗಾಗಲೀ ಹಕ್ಕು ಇಲ್ಲದಿದ್ದ ಕಾರಣ ನಾವು ಡಿಕ್ಲೇರೇಷನ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತುಗಳಲ್ಲಿ ವ್ಯವಸಾಯ ಮಾಡುತ್ತಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿಲ್ಲ. ನಾವು ಯಾವತ್ತಿಗೂ ದಾವಾ ಸ್ವತ್ತುಗಳ ಸ್ವಾಧೀನದಲ್ಲಿರಲಿಲ್ಲ ಹಾಗೂ ಕಂದಾಯ ಪಾವತಿಸಿರಲ್ಲಿ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪೂಜಾರಿ ಮಾದಯ್ಯ ಮತ್ತು ಮಲ್ಲಪ್ಪನವರ ಕುಟುಂಬಕ್ಕೆ ಮಾತ್ರ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ.

ದಿನಾಂಕ : 04.09.2021 ಓ.ಎಸ್ ನಂ.23/2016 ರಲ್ಲಿ

ಪಿ.ಡಬ್ಲ್ಯೂ-1(ಹೇಮ್‌ಚಂದ್)

ನನ್ನ ಸಹೋದರಿಯರಿಗೆ ಮದುವೆಯಾಗಿ ಅವರವರ ಗಂಡನ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಅವರ ಮದುವೆಯನ್ನು ಹಿರಿಯರು ನಿಶ್ಚಯಿಸಿ ಮಾಡಿದ್ದರು ಎಂದರೆ ಸರಿ. ಈ ಮದುವೆಗಳ ಶಾಸ್ತ್ರ ಸಂಪ್ರದಾಯ ಕಾರ್ಯಗಳಲ್ಲಿ ಪೂಜಾರಿ ಮಾದಯ್ಯ ಮತ್ತು ಮಲ್ಲಪ್ಪ ಹಾಗೂ ಅವರ ಕುಟಂಬದವರು ಭಾಗವಹಿಸಿದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಬಹುದು. ಪೂಜಾರಿ ಮಾದಯ್ಯ ಮತ್ತು ಮಲ್ಲಪ್ಪ ಹಾಗೂ ಅವರ ಕುಟಂಬದವರು ನಮ್ಮ ಸಂಬಂಧಿಕರಲ್ಲದ ಕಾರಣ ಅವರು ಯಾವುದೇ ಶಾಸ್ತ್ರಗಳಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪೂಜಾರಿ ಮಾದಯ್ಯ ಮತ್ತು ಮಲ್ಲಪ್ಪನವರ ಹಕ್ಕಿಗೊಳಪಟ್ಟ ಆಸ್ತಿಗಳಾಗಿದ್ದು ಅವುಗಳಲ್ಲಿ ನಮಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಬಿ.ಎಂ.ಮಹದೇವಯ್ಯ ಮತ್ತು ನನಗೆ ಪೂಜಾರಿ ಮಾದಯ್ಯ ಮತ್ತು ಮಲ್ಲಪ್ಪ ಕುಟುಂಬದೊಂದಿಗೆ ರಕ್ತಸಂಬಂಧವಿಲ್ಲ ಎಂದರೆ ಸರಿಯಲ್ಲ. ನನಗೂ ದಾವಾ ಸ್ವತ್ತುಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತುಗಳ ಮೇಲೆ ಯಾವುದೇ ಹಕ್ಕು ಬಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ನಾವು ಯಾವತ್ತೂ ದಾವಾ ಸ್ವತ್ತುಗಳ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ, ನಾವು ಯಾವತ್ತೂ ಬಸವೇಶ್ವರ ಸ್ವಾಮೀ ದೇವಸ್ಥಾನದ ಪೂಜಾರಿಕೆ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಯಾವತ್ತೂ ಬಾನಂದೂರು ಮತ್ತು ಇಟ್ಟಮಡು ಗ್ರಾಮದಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ಹಬ್ಬಗಳನ್ನು ಮಲ್ಲಪ್ಪ ಮತ್ತು ಅವರ ಕುಟಂಬದವರೊಂದಿಗೆ ಆಚರಿಸಿಲ್ಲ ಹಾಗೂ ಅವರೊಂದಿಗೆ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಸಂಪೂರ್ಣವಾಗಿ ಮಲ್ಲಪ್ಪನವರ ಹೆಂಡತಿ ಮಕ್ಕಳಿಗೆ ಸೇರಿದ ಆಸ್ತಿಗಳಾಗಿದ್ದು ಅವುಗಳ ಮೇಲೆ ನಮಗೆ

ದಿನಾಂಕ : 04.09.2021 ಓ.ಎಸ್ ನಂ.23/2016 ರಲ್ಲಿ

ಪಿ.ಡಬ್ಲ್ಯೂ-1(ಹೇಮ್‌ಚಂದ್)

ಹಕ್ಕಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾವುದೇ ರಾಜೀ ಪಂಚಾಯಿತಿಗಳಾಗಿಲ್ಲ ಹಾಗೂ ನಾವು ಯಾವುದೇ ಭಾಗ ಕೇಳಿಲ್ಲ ಎಂದರೆ ಸರಿಯಲ್ಲ. ನಾವು ಬಿ.ಎಂ.ಮಹದೇವಯ್ಯನವರ ಕಾನೂನುಬದ್ಧ ವಾರಸುದಾರರಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಲಪಟಾಯಿಸಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ರಿಂದ 4 ನೇ ಪ್ರತಿವಾದಿಗಳ ಪರ ವಕೀಲರ ಮನವಿಯ ಮೇರೆಗೆ ಪಾಟೀ ಸವಾಲು ಮುಂದೂಡಿದೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.